ಪ್ರಬುದ್ಧತೆಯಲ್ಲಿ ಗಮನಿಸಬಹುದು.

ಕನ್ನಡಕ್ಕೆ ಪರಿಚಯಿಸುವ ದೃಷ್ಟಿಯಿಂದ ವಿಶ್ವ ಸಾಹಿತ್ಯದ ಮುಖ್ಯ ಕೃತಿಗಳ ಸಂಕ್ಷೇಪ ಪರಿಚಯ ಅಥವಾ ಪುಸ್ತಕ ಸಾರಾಂಶ; ಕಾದಂಬರಿಕಾರನ ಪರಿಚಯ ಮತ್ತು ಕೃತಿಯ ಮಹತ್ವ ಹಾಗೂ ತಿರುಳನ್ನು ತಿಳಿಸುವ ಸಂಕ್ಷಿಪ್ತ ವಿಮರ್ಶೆ ಎಂಬ ಕ್ರಮವನ್ನು ಅವರು ತಮ್ಮ ಅನೇಕ ವಿಮರ್ಶಾ ಪ್ರಬಂಧಗಳಲ್ಲಿ ಅನುಸರಿಸಿದರು. ಬಹುಶಃ ಅವರು ಬರೆದ ಅನೇಕ ಪತ್ರಿಕಾ ಬರಹ ಹಾಗೂ ಅಂಕಣಗಳಿಗೆ ಈ ಮಾದರಿ ಅನುಕೂಲವೂ ಆಗಿರಬಹುದು. ಮುಖ್ಯವಾದ ಮಾತೆಂದರೆ, ಅವರು ಇವೆಲ್ಲಾ ಕನ್ನಡಕ್ಕೆ ಬರಬೇಕೆಂಬ ಪ್ರೀತಿಯಿಂದ ಅವನ್ನು ವ್ಯವಸ್ಥಿತವಾಗಿ ಮಾಡಿದರು.

ಅವರ ತೌಲನಿಕ ಕ್ರಮವನ್ನು ಒಂದು ಉದಾಹರಣೆಯಿಂದ ವಿವರಿಸಬೇಕಾದರೆ, ಕಾಳಿದಾಸ ಮತ್ತು ಶೇಕ್ಸ್‌ಪಿಯರ್ ಬಗೆಗಿನ ಮಾತುಗಳನ್ನು ಗಮನಿಸಬೇಕು. ಮಾರೀಚನ ಆಶ್ರಮದಲ್ಲಿ ಬಾಲಕ ಭರತ 'ಅಮ್ಮ, ಇವನು ಯಾರು?' ಎಂದು ದುಷ್ಯಂತನ ಬಗ್ಗೆ ಕೇಳಿದಾಗ ಶಕುಂತಲೆ – 'ವಿಧಿಯನ್ನು ಕೇಳುಮಗು' ಎನ್ನುತ್ತಾಳೆ. ಆ ಬಳಿಕ ಎಲ್.ಎಸ್.ಎಸ್. ವಿಮರ್ಶೆ, 'ಮುಗ್ಧ ಶಕುಂತಲನೆ 25 ವರುಷಕ್ಕೆ 70ರ ತಾಳ್ಮೆ, ಕ್ಷಮಾಗುಣ, ವಿವೇಕ, ಪರಿಪಕ್ವತೆಗಳನ್ನು ಪಡೆದಳು' ಎಂಬುದನ್ನು ಹೇಳುತ್ತದೆ. ಮುಂದುವರಿದು ಅವರು, 'ಬದುಕಿನಲ್ಲಿ ಹೀಗೆ ಅದುಮಿಟ್ಟು ಬೆಳೆದ ಇನ್ನೊಂದು ಪಾತ್ರವನ್ನು ಕಾಣಲಾರೆವು' ಎನ್ನುತ್ತಾರೆ. ಇದರಿಂದಲೇ ಶಕುಂತಲೆಯನ್ನು ಶೇಕ್ಸ್‌ಪಿಯರ್‌ನ 'ದಿ ಟೆಂಪೆಸ್ಟ್' ನಾಟಕದ 'ಮಿರಾಂಡ'ಳೊಡನೆ ಹೋಲಿಸುವುದರಲ್ಲಿ ಅರ್ಥವಿಲ್ಲ ಎಂಬುದು ಅವರ ವಾದ. ಆ ಮೂಲಕ ವಸಾಹತುಶಾಹಿ ಚಿಂತನೆಯಲ್ಲಿ ಬೆಳೆದ ಕಾಳಿದಾಸ–ಶೇಕ್ಸ್‌ಪಿಯರ್ ಹೋಲಿಕೆಯ ಹಲವು ನೆಲೆಗಳನ್ನು ಅವರು ತಳ್ಳಿಹಾಕುತ್ತಾರೆ. ಇಂಗ್ಲಿಷ್ ಹಾಗೂ ವಿಶ್ವ ಸಾಹಿತ್ಯವನ್ನು ಕನ್ನಡಕ್ಕೆ ಪರಿಚಯಿಸಿದರೂ ಎಲ್.ಎಸ್. ಶೇಷಗಿರಿರಾಯರು ವಸಾಹತುಶಾಹಿ ಚಿಂತನೆಗೆ ಒಳಗಾಗಿ ಆ ಕೆಲಸವನ್ನು ಮಾಡಲಿಲ್ಲ. ಕನ್ನಡ ಅಸ್ಮಿತೆಯನ್ನು, ಭಾರತೀಯ ಚಿಂತನೆಯನ್ನು ಎತ್ತಿಹಿಡಿದು ಕನ್ನಡಕ್ಕಾಗಿ ಅವರು ಇಂಗ್ಲಿಷನ್ನು ಪ್ರವೇಶಿಸುತ್ತಾರೆ ಎಂಬುದು ನೆನಪಿಡಬೇಕಾದ ವಿಚಾರವಾಗಿದೆ.

ಕಾಫ್ಕ, ಟಾಲ್‌ಸ್ಟಾಯ್, ಹೀಗೆ ಅನೇಕ ಲೇಖಕರ ಬಗ್ಗೆ ಅವರು ಬರೆಯುತ್ತಾರೆ. ಸ್ವತಃ ಇಂಗ್ಲಿಷಿನಲ್ಲಿ ಮಹಾಭಾರತವನ್ನು ಬರೆದ ಶೇಷಗಿರಿರಾಯರ ಅಧ್ಯಯನದ ಮೂಲದಲ್ಲಿ ವ್ಯಾಸ, ವಾಲ್ಮೀಕಿ, ಗಯಟೆ ಮೊದಲಾದವರಿದ್ದಾರೆ. ಕಾಫ್ಕನ ನಾಯಕರು ಸಾಮಾನ್ಯ ಮನುಷ್ಯರು, ಸಾಮಾನ್ಯರ ದೌರ್ಬಲ್ಯಗಳನ್ನು ಹೊಂದಿದವರು. ನಿತ್ಯ ಜೀವನದ ಸಾಮಾನ್ಯ ಘಟನೆಗಳ ಮೂಲಕವೇ ಕಾಫ್ಕ ಬದುಕನ್ನು ಅನ್ವೇಷಿಸಿ ಬಾಳು ಎಂದರೇನೆಂಬುದನ್ನು ತಿಳಿದುಕೊಳ್ಳಲು ಪ್ರಯತ್ನಿಸುತ್ತಾನೆ. ಭಯ ಜೀವನದ ಕಟ್ಟಕಡೆಯ ಸತ್ಯವಲ್ಲ ಎಂಬುದನ್ನು ಅವನು ತೋರಿಸುತ್ತಾನೆ. ಮಾರ್ಕ್ಸಿಸ್ಟ್ ಚಿಂತಕ ಲುಕಾಕ್ಸ್ ಕೂಡಾ 'ಭಯವೇ ಜೀವನದ ಕಡೆಯ ಅನುಭವವಲ್ಲ' ಎನ್ನುತ್ತಾನೆ. ಏಕಾಕಿತನ, ಭಯ, ದಿಗ್ಭ್ರಾಂತಿ ಮನುಷ್ಯ ಜೀವನದ ಬಹು ಸತ್ಯವಾದ ಒಂದು ಭಾಗ. ಆದರೆ ವ್ಯಾಸ, ಶೇಕ್ಸ್‌ಪಿಯರ್, ಗಯಟೆ ಎಲ್ಲರೂ ಬದುಕಿನಲ್ಲಿ ಈ ಭಯಾನಕ ಏಕಾಕಿತನ, ನಿರಾಸೆ ಮೊದಲಾದವುಗಳನ್ನು ಅನುಭವಿಸಿಯೇ ಮುಂದೆ ಹೋದವರು ಎನ್ನುವಾಗ ಎಲ್.ಎಸ್.ಎಸ್. ಅವರ ಗ್ರಹಿಕೆ ಅಭಿಜಾತ (classical) ಕ್ರಮದಿಂದ ಪ್ರೇರೇಪಿತವಾದುದು ಎಂಬುದು ಸ್ಪಷ್ಟವಾಗುತ್ತದೆ.

ಎಲ್.ಎಸ್.ಎಸ್. ಅವರ ಬರಹ ಪ್ರಪಂಚ ದೊಡ್ಡದು. ತಮ್ಮ ಗುಣಗ್ರಾಹಿ ಬರಹಗಳಿಂದ ಅವರು ವಿಮರ್ಶೆಗೆ ಗೌರವ ತಂದರು. ಸಾಹಿತ್ಯ ಸಂವೇದನೆ ಮತ್ತು ಪಾಂಡಿತ್ಯ (sensibility and scholarship) ಒಟ್ಟಾದಾಗ ಬರಹ ಪಡೆಯುವ ಗುಣಗೌರವವನ್ನು ಅವರು ತೋರಿಸಿಕೊಟ್ಟರು. ಕನ್ನಡಕ್ಕೆ ಅವರ ಅನೇಕ ಕೃತಿಗಳು ಆಕರ ಗ್ರಂಥಗಳಾಗಿವೆ. ಅಂತಹ ದೈತ್ಯ ಪ್ರತಿಭೆ ಕನ್ನಡ ನೆಲದಲ್ಲಿ ಉಳಿದು, ಬೆಳೆದು ನಮಗಾಗಿ ಬರೆದುದು ಕನ್ನಡದ ಭಾಗ್ಯ. ಅವರ ಈ ಶತಮಾನೋತ್ಸವ ಸಂದರ್ಭದಲ್ಲಿ ಲೇಖನದ ಮೊದಲಿಗೆ ಉಲ್ಲೇಖಿಸಿದ ಜಿ.ಎಸ್. ಶಿವರುದ್ರಪ್ಪ ಅವರ ಕವನ ಹೇಳುವಂತೆ ಹೆಸರು, ಲಾಭ, ಪದವಿಗಳ ಆಸೆಯಿಲ್ಲದೆ, ಗಿರಿಯಷ್ಟು ಸಾಧಿಸಿದರೂ ಉಳಿಯುವುದೆಷ್ಟು ಎಂಬ ಚಿಂತೆಯಿಲ್ಲದೆ ಅವರು ಕನ್ನಡದ ಕೆಲಸ ಮಾಡಿದರು. ಸ್ವಾತಂತ್ರ್ಯ ಹೋರಾಟ, ನವೋದಯಗಳ ಆದರ್ಶಗಳಿಂದ ವಿಮುಖರಾಗದೆ ಕನ್ನಡಕ್ಕೆ ತಮ್ಮ ವಿದ್ವತ್ –ವಿಮರ್ಶೆಗಳ ಮೂಲಕ ಎಲ್. ಎಸ್. ಶೇಷಗಿರಿರಾಯರು ದೊಡ್ಡ ಕೊಡುಗೆಯನ್ನಿತ್ತರು. ●